ಆನ್‌ಲೈನ್ ಮೂಲಕ APL ಪಡಿತರ ಚೀಟಿ ವಿತರಣೆ

881 (1134) ಶ್ರೀನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಇಂಧನ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 'ಆನ್‌ಲೈನ್' ಮೂಲಕ APL ಪಡಿತರ ಚೀಟಿ ಅರ್ಜಿ ಸ್ವೀಕರಿಸುವ ಕಾರ್ಯ ಆರಂಭವಾಗಿದ್ದು, ಅದಕ್ಕೆ ಪಡಿತರ ಚೀಟಿ ವಿತರಣೆ ಯಾವಾಗ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಿಲ್ಲವೇಕೆ?

ಆ) ರಾಜ್ಯದಲ್ಲಿ ಬಡವರಿಗೆ ತುರ್ತಾಗಿ ಬೇಕಾಗಿರುವ BPL ಪಡಿತರ ಚೀಟಿ, ಅದನ್ನು ಸ್ಥಗಿತಗೊಳಿಸಿದ್ದು, ಪುನಃ ವಿತರಣೆ ಕಾರ್ಯ ಆರಂಭಿಸ ಲಾಗುವುದೆ, ಆರಂಭಿಸಲು ಸರ್ಕಾರಕ್ಕೆ ಇರುವ ತೊಡಕುಗಳೇನು;

ಇ) ಬಡವರಿಗೆ ಆಹಾರ ಸಾಮಗ್ರಿ, ಸೀಮೆಎಣ್ಣೆ ಮಾತ್ರವಲ್ಲದೆ ಹೃದಯಕ್ಕೆ ಸಂಬಂಧಿಸಿದ ರೋಗಗಳ ಚಿಕಿತ್ಸೆಗೆ BPL ಚೀಟಿ ಅತ್ಯವಶ್ಯಕ ವಾಗಿದ್ದು, ಇದರಿಂದ ಬಡವರು ಹೃದಯ ಸಂಜೀವಿನಿ ಯೋಜನೆಯ ಸೌಲಭ್ಯವನ್ನು ಪಡೆಯಲು ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇಕೆ;

ಈ) BPL ಪಡಿತರ ಚೀಟಿ ವಿತರಣೆಗೆ ಅರ್ಜಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) 'ಆನ್ ಲೈನ್' ಮೂಲಕ APL ಮಾತ್ರವಲ್ಲದೆ BPL ಪಡಿತರ ಚೀಟಿಗಳಿಗಾಗಿಯೂ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ರಾಜ್ಯದ ವಿವಿಧ ಪಟ್ಟಣ ಮತ್ತು ಗ್ರಾಮೀಣ ಪ್ರದೇಶದಲ್ಲಿ ಎಷ್ಟು ಅರ್ಜಿಗಳು ಬರಬಹುದು ಎನ್ನುವ ಅಂದಾಜು ಇರುವುದಿಲ್ಲ. ಸ್ವೀಕರಿಸಿದ ಅರ್ಜಿಗಳನ್ನು ಸ್ಥಳ ತನಿಖೆ ಮಾಡಿ ಪರಿಶೀಲಿಸಿ, ಪಡಿತರ ಚೀಟಿಗಳನ್ನು ನೀಡಬೇಕಾಗಿದೆ. ತ್ವರಿತವಾಗಿ ಪಡಿತರ ಚೀಟಿಗಳನ್ನು ವಿತರಿಸಬೇಕು ಎಂಬುದು ಸರ್ಕಾರದ ಗುರಿಯಾಗಿರುತ್ತದೆ.

ಆ) ದಿನಾಂಕ: 18.11.2011ರಿಂದ BPL ಪಡಿತರ ಚೀಟಿಗಳಿಗಾಗಿ ಸಹ "ಆನ್‌ಲೈನ್" ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ಅರ್ಹ ಕುಟುಂಬ ಗಳಿಗೆ ಆದಷ್ಟು ಬೇಗನೆ ಪಡಿತರ ಚೀಟಿ ನೀಡಲು ಕ್ರಮ ಕೈಗೊಳ್ಳಲಾಗುವುದು.

ಇ) ಸರ್ಕಾರವು ಅರ್ಹ ಬಿಪಿಎಲ್ ಕುಟುಂಬಗಳು ಎದುರಿಸುತ್ತಿರುವ ಕಷ್ಟವನ್ನು ಅರಿತಿದೆ.

ಈ) ದಿನಾಂಕ: 18.11.2011 ರಿಂದ "ಆನ್‌ಲೈನ್" ಮೂಲಕ ಬಿಪಿಎಲ್ ಪಡಿತರ ಚೀಟಿಗಳಿಗಾಗಿ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

a) Through 'online' applications for both APL and BPL ration cards are being received. It is difficult to estimate the number of applications that may be received from urban and rural areas. Local inspections will have to be conducted in the respect of the applications received, before issuing the cards. Government is aimimg to distribute ration cards at the earliest.

b) Applications for BPL ration cards also are being received "online" from 18.11.2011. Action will be taken to issue new ration cards to eligible families as early as possible.

c) Government is aware of the hardship faced by eligible BPL families.

d) Application for BPL ration cards are being received "online" from 18.11.2011.

ಬಾಲ ಸಂಜೀವಿನಿ ಯೋಜನೆ ಇತರ ಜಿಲ್ಲೆಗಳಿಗೆ ವಿಸ್ತರಿಸುವುದು

882 (814) ಶ್ರೀ ಪಾಟೀಲ್ ಎಂ.ಬಿ. (ಬಬಲೇಶ್ವರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಾಲಸಂಜೀವಿನಿ ಯೋಜನೆ ಜಾರಿಯಲ್ಲಿ ತಂದಂತಹ ಆಸ್ಪತ್ರೆಗಳು ಎಷ್ಟು?

ಆ) ಯೋಜನೆಯ ಉಪಯೋಗ ಪಡೆದಂತಹ ಫಲಾನುಭವಿಗಳ ಸಂಖ್ಯೆ ಎಷ್ಟು?